**ದಿನಾಂಕಃ 24.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

1. ನಾನು ಡಿಗ್ರಿ ಮುಗಿಸಿರುತ್ತೇನೆ. ನನ್ನ ಯಜಮಾನರು ಸಹ ಡಿಗ್ರಿ ಮುಗಿಸಿರುತ್ತಾರೆ. ನಾವಿಬ್ಬರೂ ಪ್ರೀತಿಸಿ ಮದುವೆಯಾಗಿರುತ್ತೇವೆ. ನಮಗೂ ನನ್ನ ಗಂಡನ ಮನೆಗೂ ಎಷ್ಟು ಅಂತರವಿರುತ್ತದೆಂದರೆ ಸಾಕ್ಷಿಯು ಅಂದಾಜಿನಲ್ಲಿ 500 ಮೀಟರ್ ಅಂತರವಿರುತ್ತದೆಂದು ನುಡಿಯುತ್ತಾರೆ. ನನ್ನನ್ನು ಮೊದಲಿಗೆ ಅವರು ಬಂದು ಇಷ್ಟ ಪಡುತ್ತಿರುವುದಾಗಿ ಹೇಳಿ ನಾನು ಮದುವೆಯಾಗದೇ ಇದ್ದರೆ ಸಾಯುವುದಾಗಿ ಹೇಳಿದಾಗ ನನ್ನ ತಂದೆ ವಿಚಾರ ಮಾಡಿ ನನಗೂ ಒಪ್ಪಿ ಗೆ ಇದ್ದ ಮೇರೆಗೆ ಮದುವೆ ಮಾಡಿಕೊಟ್ಟಿರುತ್ತಾರೆ. ನಾನು ಮದುವೆಯಾಗುವ ಸಂದರ್ಭದಲ್ಲಿಯೇ ನನ್ನ ಗಂಡನ ಮನೆಯಲ್ಲಿ ಯಾರು ಯಾರು ಇರುತ್ತಾರೆ ಅವರ ಹಣಕಾಸಿನ ಸ್ಥಿತಿ ಹಾಗೂ ಆಸ್ತಿಯ ಬಗ್ಗೆ ತಿಳಿದುಕೊಂಡಿರುತ್ತೇನೆಂದರೆ ಸಾಕ್ಷಿಯು ಅವರಿಗೆ ತಮ್ಮ ಇರುವುದು ಗೊತ್ತಿತ್ತು ಆದರೆ ಆಸ್ತಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯತ್ತಾರೆ. ನನ್ನ ಯಜಮಾನರ ತಮ್ಮನಿಗೆ ನಮಗಿಂತಲೂ ಮುಂಚೆಯೇ ಮದುವೆಯಾಗಿತ್ತು.

2. ಮದುವೆಯಾದ ನಂತರ ನಾನು ಒಂದರಿಂದ ಒಂದುವರೆ ವರ್ಷ ಮಾತ್ರ ಜೊತೆಯಲ್ಲಿ ಅವರ ಮನೆಯಲ್ಲಿದ್ದೇನು. ಮದುವೆಯಾದ 3 ತಿಂಗಳು ನನ್ನನ್ನು ಚೆನ್ನಾಗಿಯೇ ನೋಡಿಕೊಂಡಿದ್ದರು ಆದಾದ ನಂತರ ದುಡ್ಡಿನ ವಿಚಾರದಲ್ಲಿ ಜಗಳ ಮಾಡಲು ಶುರು ಮಾಡಿರುತ್ತಾರೆ. ನಮ್ಮ ಹಾಗೂ ಅವರ ಕುಟುಂಬದ ಹಳೆ ಸಂಬಂಧ ಎಂದರೆ ಸರಿ. ನಮ್ಮದು ಹಳೆ ಸಂಬಂಧವಾಗಿರುವ ಕಾರಣ ಎದುರುದಾರರ ಕುಟುಂಬವೇ ಸರಳವಾಗಿ ನಮ್ಮ ಮದುವೆ ಮಾಡಿರುತ್ತಾರೆಂದರೆ ಸರಿ. ಆ ಸಂದರ್ಭದಲ್ಲಿ ವರೋಪಚಾರ ಎಂಬಂತೆ ನಾವು ಅವರಿಗೆ ಹಾಗೂ ಅವರು ನಮಗೆ ಕೊಟ್ಟಿರುತ್ತಾರೆಂದರೆ ಸರಿ. ಆಗ ನಮ್ಮ ಮಧ್ಯೆ ಯಾವ ಮನಸ್ತಾಪ ಇರಲಿಲ್ಲ ಎಂದರೆ ಸರಿ.

3. ಮದುವೆಯಾದ ನಂತರ ಗಂಡನ ಮನೆಯಿಂದ ತವರು ಮನೆಗೆ ಹೋಗಿ ಬರುವ ಸಂಪ್ರಾದಾಯಗಳನ್ನು ಮಾಡಿಕೊಂಡಿರುತ್ತೇವೆ. ನನ್ನ ಹಾಗೂ ನನ್ನ ಗಂಡನ ಮಧ್ಯೆ ಮಕ್ಕಳು ಈಗಲೇ ಬೇಡ ಎಂಬ ವಿಚಾರದಲ್ಲಿ ಯಾವುದೇ ಮಾತಕತೆ ಆಗಿರುವುದಿಲ್ಲ. ನಾವಿಬ್ಬರೂ ನಮ್ಮ ಕುಟುಂಬದವರ ಜೊತೆ ಮುಕ್ತವಾಗಿ ನಮ್ಮ future plan ಹಾಗೂ ಮಕ್ಕಳು ಆದರೆ ಯಾವ ರೀತಿ ನೋಡಿಕೊಳ್ಳಬೇಕೆಂಬ ವಿಚಾರಗಳನ್ನು ಮಾತನಾಡಿರುವುದಿಲ್ಲ. ನನ್ನ ಗಂಡನ ಮನೆಯವರು ಹಣಕಾಸಿನ ವಿಚಾರದಲ್ಲಿ ಚೆನ್ನಾಗಿಯೇ ಇದ್ದಾರೆ. 10 ಲಕ್ಷ ಬೇಡಿಕೆ ಇಟ್ಟಾಗ ನಮ್ಮ ಕುಟುಂಬದ ಹಿರಿಯರನ್ನು ಕೂರಿಸಿ ಅಥವಾ ದೂರಾಗಾಲೀ ಕೊಟ್ಟಿರುತ್ತೇನಾ ಎಂಬ ಪ್ರಶ್ನೆಗೆ ಸಾಕ್ಷಿಯು ಊರಿನ ಮುಖಂಡರು ಮಾತನಾಡಿ ಸರಿ ಮಾಡಿರುತ್ತಾರೆಂದು ನುಡಿಯುತ್ತಾರೆ. ನನ್ನ ಯಜಮಾನರ ದೊಡ್ಡಪ್ಪ ಅವರ ಕಡೆ ಮಾತನಾಡಲು ಬಂದಿದ್ದರು. ನನ್ನ ಕಡೆಯಿಂದ ತಾತ ಇದ್ದರು. ಪಂಚಾಯತಿಯಲ್ಲಿ ಇಬ್ಬರಿಗೂ ತಿಳುವಳಿಕೆ ಹೇಳಿರುತ್ತಾರೆ. ಇಬ್ಬರಿಗೂ ಈ ರೀತಿ ಮಾಡಿಕೊಳ್ಳಬೇಡಿ ಚೆನ್ನಾಗಿ ಬಾಳುವೆ ಮಾಡಿ ಎಂದು ಹೇಳಿರುತ್ತಾರೆ. ಸಾಕ್ಷಿ ನನಗೆ ಗೊತ್ತಿಲ್ಲದೇ ಒಡವೆಗಳನ್ನು ಅಡವಿಟ್ಟ ಬಗ್ಗೆ ಹೇಳಿರುತ್ತೇನೆಂದು ನುಡಿಯುತ್ತಾರೆ.

4. ನನ್ನ ಒಡವೆಗಳ ಸಂಬಂಧ ಖರೀದಿ ಮಾಡಿರುವ ರಶೀದಿಗಳನ್ನು ನಾನು ನ್ಯಾಯಾಲಯಕ್ಕೆ ಒದಗಿಸಿರುತ್ತೇನೆ. ಒಡವೆಗಳನ್ನು ಯಾರ ಬಳಿ ಅಡವಿಟ್ಟಿದ್ದಾರೆಂದು ನನಗೆ ಗೊತ್ತಿಲ್ಲ ಆದರೆ ಅವರ ತಾಯಿ ಅಂದರೆ 3ನೇ ಎದುರುದಾರರು ವಿಚಾರವನ್ನು ತಿಳಿಸಿರುತ್ತಾರೆ. ಒಡವೆ ಅಡವಿಟ್ಟ ಬಗ್ಗೆ ನನ್ನ ಹಾಗೂ ನನ್ನ ಯಜಮಾನರ ಮಧ್ಯೆ ಮಾತುಕತೆ ಆಗಿತ್ತಾ ಎಂದರೆ ಸಾಕ್ಷಿ ಅವರು ನನಗೆ ಹೇಳಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಒಡವೆಗಳನ್ನು ಬಿಡಿಸಿಕೊಳ್ಳಲು ನಾನು ನನ್ನ ಗಂಡನನ್ನು ಕೇಳಿದಾಗ ಸ್ವಲ್ಪ ಜಗಳವಾಗಿರುತ್ತದೆ ಈ ಸಂಬಂಧ ನನ್ನ ತಾಯಿ ಮನೆಗೆ ಬಿಟ್ಟಿರುತ್ತಾರೆ ಅವರು ಒಡವೆಗಳನ್ನು ಬಿಡಿಸಿಕೊಂಡು ಬರುವವರೆಗೂ ತಾಯಿ ಮನೆಯಿಂದ ಬರುವುದಿಲ್ಲ ಎಂದು ಹೇಳಿರುತ್ತೇನೆಂದು ಸಾಕ್ಷಿ ನುಡಿಯುತ್ತಾರೆ.

5. ನಾನು ಕೇವಲ 3 ತಿಂಗಳು ಶಾಸ್ತ್ರ ಸಂಪ್ರಾದಾಯವನ್ನು ಹೊರತುಪಡಿಸಿ ನನ್ನ ಯಜಮಾನರ ಮನೆಯಲ್ಲಿದ್ದು ನಂತರದಲ್ಲಿ ನನ್ನ ತವರು ಮನೆಗೆ ಹೋಗಿರುತ್ತೇನೆಂದರೆ ಸರಿಯಲ್ಲ. ನಾನು ನನ್ನ ತಾಯಿ ಮನೆಗೆ ಹೋಗುವಾಗ ನನಗೆ ಸೇರಿದ ವಸ್ತುಗಳು ಹಾಗೂ

ಒಡವೆಗಳನ್ನು ತೆಗೆದುಕೊಂಡು ಹೋಗಿರುತ್ತೇನೆಂದರೆ ಸರಿಯಲ್ಲ. ಈ ಸಂಬಂಧ 2-3 ಬಾರಿ ಪಂಚಾಯತಿಗಳು ಆಗಿರುತ್ತವೆಂದರೆ ಸರಿಯಲ್ಲ. ಪಂಚಾಯತಿಯಲ್ಲಿ ನನ್ನನ್ನು ಸರಿಯಾಗಿ ಗಂಡನ ಜೊತೆ ಬಾಳುವೆ ಮಾಡಲು ತಿಳಿ ಹೇಳಿದರೂ ಸಹಿತ ನಾನು ವಾಪಸ್ ಹೋಗಿರುವುದಿಲ್ಲ ಎಂದರೆ ಸಾಕ್ಷಿ ಆ ರೀತಿ ಪಂಚಾಯತಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಅರ್ಜಿಯಲ್ಲಿ ನನ್ನ ತಂದೆ ತಾಯಿ ಸುಮಾರು 1 ಲಕ್ಷಕ್ಕೂ ಹೆಚ್ಚು ಆಸ್ಪತ್ರೆ ಶುಲ್ಕವನ್ನು ಭರಿಸಿರುತ್ತಾರೆಂದು ಹೇಳಿದ್ದು ಆದರೆ ಅದನ್ನು ನನ್ನ ಗಂಡನ ಮನೆಯ ಕಡೆಯೇ ಭರಿಸಿರುತ್ತಾರೆಂದರೆ ಸರಿಯಲ್ಲ.

6. ನಾನು ಅರ್ಜಿಯಲ್ಲಿ ಖಾತೆಯಲ್ಲಿ ಸುಮಾರು 2 ಲಕ್ಷ ರೂಪಾಯಿಯನ್ನು ಹಾಕಿದ್ದು ಅದನ್ನು ಸದರಿ ನನ್ನ ಯಜಮಾನರು ದುರ್ಬಳಿಕೆ ಮಾಡಿದ್ದಾರೆಂದು ಹೇಳಿದ್ದು ಈ ಸಂಬಂಧ ದಾಖಲಾತಿಯನ್ನು ಹಾಜರು ಪಡಿಸಿಲ್ಲ. ಸಾಕ್ಷಿಯು ಸದರಿ 2 ಲಕ್ಷ ಹಣವನ್ನು ನನ್ನ ಬಳಿ ನನ್ನ ಗಂಡ ಸಿಂಡಿಕೇಟ್ ಬ್ಯಾಂಕಿನಲ್ಲಿ ಎಫ್ ಡಿ ಮಾಡಿಸುತ್ತೇನೆಂದು ಸಹಿ ಮಾಡಿಸಿಕೊಂಡು ತೆಗೆದುಕೊಂಡು ಹೋದರು ಆದರೆ ಆ ರೀತಿ ಯಾವುದೇ ಎಫ್ ಡಿ ಮಾಡಿಸಿಲ್ಲ ಎಂದು ನುಡಿಯುತ್ತಾರೆ. ಈ ಸಂಬಂಧ ನಾನು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ.

7. ನಾನು ನನ್ನ ಅರ್ಜಿಯಲ್ಲಿ ಒಡವೆಗಳ ಬಗ್ಗೆ ಹಾಗೂ ಬಟ್ಟೆಗಳ ಖರ್ಚು ಹಾಗೂ 3 ಲಕ್ಷ ವರದಕ್ಷಿಣೆ ವರೋಪಾಚಾರ ಇತ್ಯಾದಿ ಸೇರಿದಂತೆ 6 ಲಕ್ಷ ಖರ್ಚಾಗಿರುತ್ತದೆಂದು ಹೇಳಿದ್ದು ಈ ಸಂಬಂಧ ದಾಖಲಾತಿಗಳನ್ನು ನೀಡಿದ್ದೇನಾ ಎಂದರೆ ಸಾಕ್ಷಿಯು ಒಡವೆಗಳ ರಶೀದಿಗಳನ್ನು ಕೊಟ್ಟಿದ್ದೇನೆ. ಮದುವೆಯಲ್ಲಿ ಅವರಿಗೆ ನಗದು ರೂಪದಲ್ಲಿ ಹಣ ಕೊಟ್ಟಿರುವ ಸಂಬಂಧ ದಾಖಲಾತಿ ಇರುವುದಿಲ್ಲ ಹಾಗೂ ಮದುವೆಯನ್ನು ಗಂಡಿನ ಮನೆಯಲ್ಲೇ ಮಾಡಿಕೊಂಡಿರುತ್ತಾರೆ. ಉಳಿದಂತೆ ಬಟ್ಟೆಗಳು ಹಾಗೂ ಇತರೆ ಖರ್ಚುಗಳ ಸಂಬಂಧ ಯಾವುದೇ ರಶೀದಿಗಳು ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳಿರುವಂತೆ ಪದೇ ಪದೇ ನನ್ನ ಗಂಡನ ಮನೆಯಲ್ಲಿ ಒತ್ತಡ ಹಾಕುತ್ತಿದ್ದರು ಹಣ ಕೇಳುತ್ತಿದ್ದರು ಎಂಬುದರ ಬಗ್ಗೆ ಆಗಲೇ ದೂರು ಕೊಡಲು ಯಾವುದೇ ಆಡಚಣೆ ಇರಲಿಲ್ಲ

ಎಂದರೆ ಸರಿ. ದೈಹಿಕವಾಗಿ ಹಲ್ಲೆ ಮಾಡಿದಾಗ ಅಥವಾ ಅವಾಚ್ಯ ಶಬ್ದಗಳಿಂದ ಬೈದಾಗ ದೂರನ್ನು ಕೊಡಲು ನನಗೆ ಯಾವುದೇ ಆಡಚಣೆ ಇರಲಿಲ್ಲ ಎಂದರೆ ಸಾಕ್ಷಿ ಆತ ಸರಿ ಹೋಗಬಹುದು ಎಂಬ ಕಾರಣಕ್ಕೆ ನಾನು ಸುಮ್ಮನಿದ್ದೆ ಎಂದು ನುಡಿಯುತ್ತಾರೆ.

8.ನಾವು ದಿಃ17.06.2018 ರಂದು ಮದುವೆಯಾಗಿರುತ್ತೇವೆಂದರೆ ಸರಿ. ದಿಃ20.05.2019 ಕ್ಕೆ ನಾನು ಗರ್ಭವತಿಯಾಗಿದ್ದೆ ಎಂದರೆ ಸರಿ. ಗರ್ಭವತಿಯಾದ ಸಂದರ್ಭದಲ್ಲಿ ನಾನೇ ಹೋಗಿ ಆಸ್ಪತ್ರೆಗೆ ಸೇರಿರುತ್ತೇನೆಂದರೆ ಸಾಕ್ಷಿಯು ಅವರೇ ಹೋಗಿ ಸೇರಿಸಿರುತ್ತಾರೆಂದು ನುಡಿಯುತ್ತಾರೆ. ನಾನು ಗರ್ಭವತಿಯಾದಾಗ 2 ಮತ್ತು 3ನೇ ಎದುರುದಾರರು ನನಗೆ ಹಿಂಸೆ ಕೊಟ್ಟಿರುವ ಬಗ್ಗೆ ಆಸ್ಪತ್ರೆಯ ವೈದ್ಯರಿಗಾಗಲೀ ಅಥವಾ ಪೋಲೀಸರಿಗೆ ದೂರಾಗಲೀ ನಾನು ಕೊಟ್ಟಿರುವುದಿಲ್ಲ. ನನ್ನ ತಂದೆಯ ಮನೆಯವರೇ ನನ್ನನ್ನು ಗರ್ಭಪಾತ ಮಾಡಿಸಲು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ವಿಚಾರ ತಿಳಿದು ನನ್ನ ಗಂಡ ಅಲ್ಲಿಗೆ ಬಂದು ಆಸ್ಪತ್ರೆಯ ಖರ್ಚು ವೆಚ್ಚ ಎಲ್ಲಾವನ್ನು ನೋಡಿದ್ದರು ಎಂದರೆ ಸುಳ್ಳು. ನಾನು ಆಸ್ಪತ್ರೆಗೆ ಹೋದಾಗ ನನ್ನ ತಾಯಿ ತಂದೆ ನನ್ನನ್ನು ನೋಡಿಕೊಳ್ಳಲು ಬಂದಿದ್ದರು. ಮಗುವನ್ನು ಅಬಾಟ್ ಮಾಡಿಸಿಕೊಳ್ಳಲು ನನ್ನ ಅತ್ತೆ ಮಾವ ಯಾವುದೇ ಒತ್ತಡ ಮಾಡಿರುವುದಿಲ್ಲ ನಾನಾಗಿಯೇ ಮಾಡಿಕೊಂಡಿರುತ್ತೇನೆಂದರೆ ಸಾಕ್ಷಿಯು ನನಗೆ ಗರ್ಭಪಾತ ಮಾಡಿಸಿಕೋ ಎಂದು ಪದೇ ಪದೇ ಹೇಳುತ್ತಿದ್ದರು ನಂತರ ನಾನು ವಿಷ ಸೇವಿಸಿದಾಗ ನನ್ನ ತಂದೆ ತಾಯಿ ಹಾಗೂ ಯಜಮಾನರು ಬಂದಿದ್ದರು ಎಂದು ನುಡಿಯುತ್ತಾರೆ. ನಾನೇ ಮಗು ಬೇಡ ಎಂಬ ವಿಚಾರದಲ್ಲಿ ನನ್ನ ತಂದೆ ತಾಯಿ ಮನೆಯಿಂದ ಹೋಗಿ ಆಸ್ಪತ್ರೆಗೆ ಸೇರಿ ಅಬಾಟ್ ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ನನ್ನ ಗಂಡನ ಬಳಿ ನನಗೆ ಇನ್ನು ಚಿಕ್ಕ ವಯಸ್ಸು ನನ್ನ ಸೌಂದರ್ಯ ಹಾಳಾಗುತ್ತದೆಂದು ಹೇಳಿ ಈ ರೀತಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ಈ ರೀತಿ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹಿತ ಈ ಸಂಬಂಧ ಸುಳ್ಳು ನುಡಿಯುತ್ತಿದ್ದೇನೆಂದರೆ ಸಾಕ್ಷಿಯು ಯಾರು ಕೂಡ ತನ್ನ ಮಗುವನ್ನು ಕಳೆದುಕೊಳ್ಳುವ ನಿರ್ಧಾರ ಮಾಡುವುದಿಲ್ಲ ಎಂದು ನುಡಿಯುತ್ತಾರೆ.

9. ನನಗೆ ಅಬಾಟ್ ಆದ ನಂತರ ಆಸ್ಪತ್ರೆಯಲ್ಲಿದ್ದಾಗ ಆಸ್ಪತ್ರೆಯವರೇ ಊಟ ಕೊಡುತ್ತಿದ್ದರು ಎಂದರೆ ನನಗೆ ನೆನಪಿಲ್ಲ. ಸಾಮಾನ್ಯವಾಗಿ ಅಬಾಷನ್ ಆದಾಗ ಊಟದ ವಿಚಾರದಲ್ಲಿ ವೈದ್ಯರು ಅದೇ ರೀತಿಯಲ್ಲಿ ಊಟ ಮಾಡಬೇಕೆಂಬ ನಿಯಮ ಹೇಳುತ್ತಾರೆಂದರೆ ಸರಿ. ಅದೇ ರೀತಿ ನಾನು ಊಟದ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದೆ ಎಂದರೆ ಸರಿ. ಆ ಸಂದರ್ಭದಲ್ಲಿ ನರ್ಸಗಳು ಅಥವಾ ಆಸ್ಪತ್ರೆ ಸಿಬ್ಬಂದಿ ವೈದ್ಯರು ಎಲ್ಲರೂ ಕೂಡ ಗಮನಿಸುತ್ತಾರೆಂದರೆ ಸರಿ. ನನಗೆ ಪಾಪಾಯಾ ತಿನ್ನಿಸಿ ಗಂಡನ ಮನೆಯವರು ಗರ್ಭಾಪಾತ ಮಾಡಿಸಿರುತ್ತಾರೆಂದು ನಾನು ಎಲ್ಲಿಯೂ ಕೂಡ ಹೇಳಿರುವುದಿಲ್ಲ. ತಿನ್ನಿಸಲು ಪ್ರಯತ್ನ ಮಾಡಿರುತ್ತಾರೆಂದು ಮಾತ್ರ ಹೇಳಿರುತ್ತೇನೆ. ಈ ವಿಚಾರದಲ್ಲಿ ನಾನು ನನ್ನ ಕುಟುಂಬದವರಿಗಾಗಲೀ ಅಥವಾ ಪೋಲೀಸರಿಗೆ ದೂರು ಕೊಡುವ ಪ್ರಯತ್ನವಾಗಲೀ ಮಾಡಿರುವುದಿಲ್ಲ.

10. ನನ್ನ ಗಂಡ ವರದಕ್ಷಿಣೆ ತರಬೇಕು ಇಲ್ಲವಾದ್ದಲ್ಲಿ ಬಸ್ಸಿ ನ ಚಕ್ರಕ್ಕೆ ಸಿಲುಕಿ ಸಾಯುತ್ತೇನೆಂದು ನನಗೆ ಮೇಸೇಜ್ ಮಾಡಿರುವ ಸಂಬಂಧ ನಾನು ಪೋಲೀಸರಿಗೆ ಯಾವುದೇ ದೂರು ಕೊಟ್ಟಿಲ್ಲ ಆದರೆ ಅವರು ನನಗೆ ಈ ರೀತಿ ಬ್ಲಾಕ್ ಮೇಲ್ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆತ ನನಗೆ ಪಾರಿಡಾಲ್ ಕುಡಿದು ಸಾಯಿ ಎಂದು ಹೇಳಿದಾಗ ನಾನು ದೂರನ್ನು ಕೊಟ್ಟಿರುವುದಿಲ್ಲ ಆದರೆ ನಂತರದಲ್ಲಿ ನನ್ನ ತಂದೆ ತಾಯಿಗೆ ವಿಚಾರ ತಿಳಿಸಿರುತ್ತೇನೆಂದು ನುಡಿಯುತ್ತಾರೆ. ಈ ವಿಚಾರವನ್ನು ನಾನು ನನ್ನ ಅರ್ಜಿಯಲ್ಲಿ ಹೇಳಿರುವುದಿಲ್ಲ. ಈ ವಿಚಾರವನ್ನು ಅರ್ಜಿಯಲ್ಲಿ ಹೇಳುವುದಕ್ಕೆ ಅಥವಾ ಪೋಲೀಸರಿಗೆ ದೂರು ಕೊಡುವ ಸಂಬಂಧ ನನಗೆ ಆಡಚಣೆ ಇರಲಿಲ್ಲ ಎಂದರೆ ಸರಿ. ನಾನು ಆಸ್ಪತ್ರಗೆ ಸೇರಿದ ಕಾರಣ ಸ್ವತಃ ನಾನೇ ಆಗಿದ್ದರೂ ಸಹಿತ ಎದುರುದಾರರ ವಿರುದ್ದ ಸುಳ್ಳು ಆರೋಪಣೆ ಮಾಡುತ್ತಿದ್ದೇನೆಂದರೆ ಸರಿಯಲ್ಲ.

11. ನಾವಿಬ್ಬರ ಸಂಸಾರದ ವಿಚಾರ ಅಥವಾ ಗಂಡ ಹೆಂಡತಿಯಾಗಿ ನಮ್ಮ ಅನುಬಂಧದ ವಿಚಾರದಲ್ಲಿ ಯೋಗಕ್ಷೇಮ ವಿಚಾರಿಸಿಲು ನಾವು ದಿನನಿತ್ಯ ಕರೆ ಮಾಡಿಕೊಳ್ಳುತ್ತಿದ್ದೇವು. ಸುಮಾರು 1 ರಿಂದ ಒಂದುವರೆ ವರ್ಷದ ಕಾಲ ಫೋನ್

ಮುಖಾಂತರ ಮಾತನಾಡಿಕೊಳ್ಳುತ್ತಿದ್ದೇವು. ನಾನು ಪಾಯಿಸನ್ ಕುಡಿದ ವಿಚಾರವಾದ ಮೇಲೆ ನಾನು ಅವರು ಪೋನ್ ಮುಖಾಂತರ ಮಾತನಾಡುವುದು ನಿಲ್ಲಿಸಿರುತ್ತೇವೆ. ಮನೆಗಳು ಹತ್ತಿರವೇ ಇದ್ದ ಕಾರಣ ಯಾವುದಾದರೂ ಕಾರ್ಯಕ್ರಮ ಅಥವಾ ಮನೆಯ ಮುಂದೆ ಓಡಾಡುವ ಸಂದರ್ಭದಲ್ಲಿಯೂ ಸಹಿತ ನಾವು ಮಾತನಾಡಿಕೊಂಡಿರುವುದಿಲ್ಲ. ನನ್ನ ಗಂಡ ನನ್ನನ್ನು ಮಾತನಾಡಿಸಲು ಪ್ರಯತ್ನ ಮಾಡಿದಾಗಲೂ ಸಹಿತ ಕೇವಲ ನನ್ನ ತಂದೆ ತಾಯಿ ಏನಾದರೂ ಅಂದುಕೊಳ್ಳಬಹುದು ಎಂಬ ವಿಚಾರದಲ್ಲಿ ನಾನು ಮಾತನಾಡಿಲ್ಲ ಎಂದರೆ ಸರಿಯಲ್ಲ. ಇವತ್ತಿಗೂ ಸಹಿತ ಆತ ವೈವಾಹಿಕ ಜೀವನ ಪುನರ್ ಸ್ಥಾಪಿಸಲು ಹಾಗೂ ನನ್ನ ಜೊತೆ ಸಂಸಾರ ಮಾಡಲು ನನ್ನನ್ನು ವಾಪಸ್ ಕರೆದುಕೊಂಡು ಹೋಗಲು ಆತ ತಯಾರಿದ್ದಾನೆಂದರೆ ನನಗೆ ಗೊತ್ತಿಲ್ಲ.

12. ರಾಜೀ ಸಂಧಾನದ ಮೂಲಕ ಅಥವಾ ಮಿಡಿಯೇಷನ್ ಅಥವಾ ತಜ್ಞರ ಬಳಿ conciliation ಮಾಡಿಸಿಕೊಂಡು ಇಬ್ಬರು ಮತ್ತೆ ಒಟ್ಟಾಗಿ ಬಾಳ್ವೆ ಮಾಡಲು ತಯಾರಿದ್ದೇವಾ ಎಂದರೆ ಸಾಕ್ಷಿಯು ನಾನು ತಯಾರು ಇಲ್ಲ ಎಂದು ನುಡಿಯುತ್ತಾರೆ. ನಾವು ನನ್ನ ತಂದೆ ತಾಯಿಗೆ ಇಬ್ಬರು ಮಕ್ಕಳು ನಾನು ನನ್ನ ಅಣ್ಣ. ನನ್ನ ಮದುವೆಯ ಕಾಲಕ್ಕೆ ನನ್ನ ಅಣ್ಣನಿಗೆ ಇನ್ನು ಮದುವೆಯಾಗಿರಲಿಲ್ಲ. ಈಗ ಮದುವೆಯಾಗಿರುತ್ತದೆ. ಅಣ್ಣ ಅತ್ತಿಗೆ ನಮ್ಮ ತವರು ಮನೆಯಲ್ಲೇ ಇದ್ದಾರೆಂದರೆ ಸರಿ. ಈಗ 4 ತಿಂಗಳ ಹಿಂದೆ ಮದುವೆಯಾಗಿರುತ್ತದೆ. ನಮ್ಮ ಜೊತೆ ತಂದೆ ತಾಯಿ ಕೂಡ ಇದ್ದಾರೆ.

13. ನನ್ನ ಗಂಡನ ತಮ್ಮ ಈ ಮುಂಚೆಯೇ ಮದುವೆಯಾಗಿದ್ದು ಅವರು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆಂದರೆ ಸರಿ. ನನ್ನ ಗಂಡನ ಮನೆಯಲ್ಲಿ ನನ್ನ ಗಂಡ ವಯಸ್ಸಾದ ತಂದೆ ತಾಯಿ ಇರುತ್ತಾರೆಂದರೆ ಸರಿ. ನನ್ನ ಯಜಮಾನರನ್ನು ಹೊರತು ಪಡಿಸಿ ಅವರ ಮನೆಯಲ್ಲಿ ಯಾರೂ ವಿದ್ಯಾವಂತರು ಇಲ್ಲ ಎಂದರೆ ಸಾಕ್ಷಿಯು ಅತ್ತೆ 10ನೇ ತರಗತಿಯವರೆಗೂ ಓದಿರುತ್ತಾರೆಂದು ನುಡಿಯುತ್ತಾರೆ. ನಾವು ಮದುವೆಯಾದ ಹೊಸದರಲ್ಲಿ ಅಂದರೆ ಒಂದುವರೆ ವರ್ಷದ ಕಾಲದಲ್ಲಿ ನನ್ನ ಗಂಡ ಅತ್ತೆ ಮಾವ ನಾನು ಎಲ್ಲರೂ ಚೆನ್ನಾಗಿದ್ದೇವು ಎದರೆ ಸಾಕ್ಷಿಯು ಕೇವಲ 3 ತಿಂಗಳು ಎಂದು ನುಡಿಯುತ್ತಾರೆ. ನನ್ನ ಗಂಡನ ಮನೆಯಲ್ಲಿ

ಯಾವುದೇ ಕುಟುಂಬದ ನಿರ್ಧಾರದ ಬಗ್ಗೆ ನನ್ನ ಜೊತೆಯೂ ಮಾತನಾಡುತ್ತಿದ್ದರು ಎಂರದೆ ಸರಿಯಲ್ಲ. ನಾನು ವಿದ್ಯಾಭ್ಯಾಸ ಮಾಡಿದ ಕಾರಣ ಅತ್ತೆ ಮಾವ ಹಾಗೂ ಗಂಡ ನನ್ನ ಬಳಿ ಎಲ್ಲಾ ಸಲಹೆಗಳನ್ನು ಪಡೆದುಕೊಂಡು ಕುಟುಂಬ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಮದುವೆಯ 3 ತಿಂಗಳ ನಂತರ ನಾನು ನನ್ನ ಗಂಡನಿಗೆ ಪ್ರತ್ಯೇಕವಾಗಿ ವಾಸ ಮಾಡುವ ಸಂಬಂಧ ಒತ್ತಡ ಹೇರುತ್ತಿದ್ದೆ ಎಂದರೆ ಸರಿಯಲ್ಲ. ಆಗ ವಯಸ್ಸಾದ ತಂದೆ ತಾಯಿ ಜೊತೆ ಯಾರೂ ಇಲ್ಲ ಎಂದು ಹಾಗಾಗಿ ನನ್ನನ್ನು adjest ಮಾಡಿಕೊಂಡು ಹೋಗು ಎಂದು ತಿಳಿ ಹೇಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ನಾನು ಅವರ ಜೊತೆಯಲ್ಲಿದ್ದ ಕಾಲದಲ್ಲಿ ನನ್ನನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದರು ಎಂದರೆ 3 ತಿಂಗಳ ಕಾಲ ಚೆನ್ನಾಗಿಯೇ ಇದ್ದೇವು ಎಂದು ನುಡಿಯುತ್ತಾರೆ. ಕೇವಲ ನನ್ನ ತಂದೆ ತಾಯಿ ಮನೆಯ ಮೇಲಿರುವ ವ್ಯಾಮೋಹದ ಮೇರೆಗೆ ಹಾಗೂ ಪ್ರತ್ಯೇಕವಾಗಿ ವಾಸ ಮಾಡುವ ವಿಚಾರದಲ್ಲಿ ನಾನೇ ನನ್ನ ಗಂಡನ ಮನೆ ಬಿಟ್ಟು ಹೋಗಿರುತ್ತೇನೆಂದರೆ ಸರಿಯಲ್ಲ. ಟೌನಿನಲ್ಲಿ ಮನೆ ಮಾಡುವಂತೆ ಕಾರು ಹಾಗೂ standered ಜೀವನ ಶೈಲಿ ಬೇಕೆಂತು ಒತ್ತಡ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಮದುವೆಗಿಂತಲೂ ಹಿಂದೆ ಮಾಡಿದ 5 ಲಕ್ಷ ಸಾಲವನ್ನು ನನ್ನ ತೀರಿಸಿರುತ್ತಾರೆಂದರೆ ಸರಿಯಲ್ಲ.

14. ಎದುರುದಾರರು ಆರ್ಥಿಕವಾಗಿ ಚೆನ್ನಾಗಿಯೇ ಇದ್ದು ಅವರಿಗೆ ಹಣದ ಅವಶ್ಯಕತೆ ಇರುವುದಿಲ್ಲ ಅದೇ ರೀತಿ ನನ್ನ ಗಂಡ ಸಂಸ್ಕಾರವಂತನಾಗಿದ್ದು ಚೆನ್ನಾಗಿ ಬಾಳ್ವೆ ಮಾಡಲು ಬಯಸಿದ್ದರೂ ಸಹಿತ ನಾನೇ ಅವನ ಜೊತೆ ಇರುತ್ತಿಲ್ಲ ಎಂದರೆ ಸರಿಯಲ್ಲ. ಅವರ ವಯಸ್ಸಾದ ತಂದೆ ತಾಯಿ ಹಾಗೂ ಆತನ ಯೋಗಕ್ಷೇಮ ನೋಡಿಕೊಳ್ಳುವವರು ಸಹ ಇಲ್ಲ ನಾನು ಮತ್ತೆ ಅವರ ಜೀವನಕ್ಕೆ ಹೋಗಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆಂದರೆ ನನಗೆ ಗೊತ್ತಿಲ್ಲ. ಈಗಲೂ ಸಹಿತ ಆತ ನನ್ನನ್ನು ವಾಪಸ್ ಕರೆದುಕೊಂಡು ಹೋಗಲು ತಯಾರಿದ್ದಾರೆಂದರೆ ನಾನು ತಯಾರಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಈಗಲೂ ಸಹಿತ ನನ್ನ ಬಗ್ಗೆ ಹಾಗೂ ಕುಟುಂಬದ ಬಗ್ಗೆ ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡಿದ್ದಾರೆಂರದೆ ಸರಿಯಲ್ಲ. ಈಗಲ್ಲಾ ನಾಳೆ ನಾನು ವಾಪಸ್ ಹೋಗಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆಂದರೆ ಸರಿಯಲ್ಲ.

15. ಒಂದುವರೆ ವರ್ಷದ ಕಾಲ ನನಗೆ ತುಂಬಾ ಪೀಡಿಸಿದ್ದರು ಹಣದ ವಿಚಾರದಲ್ಲಿ ತೊಂದರೆ ಕೊಟ್ಟಿದ್ದರು ಗರ್ಭಣಿಯಾದಾಗ ನಂತರ ಪಾಯಿಸಲ್ ಕುಡಿದಾಗಲೂ ನನ್ನನ್ನು ನೋಡಿರುವುದಿಲ್ಲ ಆದ್ದರಿಂದ ನನಗೆ ಹೋಗಲು ಇಷ್ಟವಿಲ್ಲ ಎಂದು ನುಡಿಯುತ್ತಾರೆ. ನಾನು ಪಾಯಿಸನ್ ಕುಡಿದು ಆಸ್ಪತ್ರೆಯಲ್ಲಿದ್ದಾಗ ನನ್ನ ಗಂಡ ಆಸ್ಪತ್ರೆಗೆ ಬಂದಿದ್ದರು ಎಂರದೆ ಸಾಕ್ಷಿಯು ನನ್ನ ತಂದೆ ಅವರಿಗೆ ದುಡ್ಡು ಕೊಟ್ಟು ಇನ್ನು ಮೇಲಾದರೂ ಚೆನ್ನಾಗಿ ಬಾಳುವೆ ಮಾಡಿ ಎಂದು ಕರೆಸಿದ್ದರು ಎಂದು ನುಡಿಯುತ್ತಾರೆ. ನಾನು ದುಡ್ಡು ಕೊಟ್ಟಿರುವುದನ್ನು ನೋಡಿರುವುದಿಲ್ಲ ಆದರೆ ತಂದೆ ಹೇಳಿರುತ್ತಾರೆಂದು ನುಡಿಯತ್ತಾರೆ. ನನ್ನ ತಂದೆ ತಾಯಿ ಇಬ್ಬರಿಗೂ ನಾನು ಪ್ರೀತಿಯ ಮಗಳಾಗಿರುತ್ತೇನೆ. ನನ್ನ ತಂದೆ ಎಂದರೆ ನನಗೆ ಅಭಿಮಾನ ಜಾಸ್ತಿ ಆದ್ದರಿಂದ ಅವರು ಹೇಳಿರುವುದೆನ್ನೆಲ್ಲ ಕೇಳುತ್ತೇನೆಂದರೆ ಸಾಕ್ಷಿ ಒಳ್ಳೆಯದನ್ನು ಕೇಳುತ್ತೇನೆಂದು ನುಡಿಯುತ್ತಾರೆ. ನನ್ನ ತಂದೆಯೇ ನನ್ನನ್ನು ವಾಪಸ್ ನನ್ನ ಗಂಡನ ಜೊತೆ ಬಾಳ್ವೆ ಮಾಡಲು ಬಿಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ಹೇಳಿರುವಂತೆ ಎದುರುದಾರರು ಯಾವುದೇ ವರದಕ್ಷಿಣೆ ಕಿರುಕುಳ ಕೊಟ್ಟಿರುವುದಿಲ್ಲ ಹಾಗೂ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ತನ್ನ ಜೊತೆ ವಾಪಸ್ ವೈವಾಹಿಕ ಜೀವನಕ್ಕೆ ಬರಲು ಮಾನ್ಯ ಕೌಟುಂಬಿಕ ನ್ಯಾಯಾಲಯದಲ್ಲಿ ಎಂ ಸಿ 80/21 ಹಾಕಿದ ನಂತರ ನಾನು ಒಂದು ಸುಳ್ಳು ದೂರನ್ನು ಆತನ ವಿರುದ್ದ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಅದು ಸಿಸಿ 48/20 ಆಗಿರುತ್ತದೆಂದರೆ ಸರಿಯಲ್ಲ. ವಾಸ್ತಾವಂಶವನ್ನು ಮರೆಮಾಚಿ ಕೇವಲ ಎದುರುದಾರರಿಗೆ ತೊಂದರೆ ಆಗಲಿ ಎಂಬ ಉದ್ದೇಶದಿಂದ ನಾನು ಸದರಿ ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ.

16. ನಿಪಿ-5 ಮತ್ತು 6 ನಾವು ಚೆನ್ನಾಗಿ ಬಾಳ್ವೆ ಮಾಡುತ್ತಿದ್ದ ದಿನಗಳ ಪೋಟೋ ಎಂದರೆ ಸಾಕ್ಷಿ ಮದುವೆಯ ಹಿಂದೆ ತೆಗೆಸಿದ ಪೋಟೋ ಎಂದು ನುಡಿಯುತ್ತಾರೆ. ನಿಪಿ-8 ರಿಂದ 17 ಕೇವಲ ಪ್ರಸ್ತುತ ಅರ್ಜಿಗೆ ಅನುಕೂಲವಾಗುವ ರೀತಿಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸತ್ಯಾಂಶವನ್ನು ಮರೆಮಾಚಿ ಕೇವಲ ಎದುರುದಾರರಿಗೆ ತೊಂದರೆ ಕೊಡುವ ಸಂಬಂಧ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಎದುರುದಾರರು ನನಗೆ ವರದಕಿಣೆ ಕಿರುಕುಳ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿಲ್ಲ

ಎಂದರೆ ಸರಿಯಲ್ಲ. ಈಗಲೂ ಕೂಡ ಸುಖ ಸಂಸಾರ ಮಾಡಲು ಯಾವುದೇ ಅಡಚಣೆ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**